<u>**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಾಗೇಪಲ್ಲಿ.**</u>

<u>**ಸಿ.ಸಿ. ಸಂಖ್ಯೆ:59/2015**</u>

| | |
|---|---|
| ಫ್ರಾಸಾ | 14 |
| ಚಾಸಾ | 14 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 29.12.2025.**

| | | |
|---|---|---|
| ಸಾಕ್ಷಿಯ ಹೆಸರು | : | ನರಸಿಂಹಮೂರ್ತಿ |
| ತಂದೆಯ/ಗಂಡನ ಹೆಸರು | : | ನರಸಿಂಹಪ್ಪ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಸಂಜೀವರಾಯನಹಳ್ಳಿ |

**(ಆರೋಪಿಯು ಗೈರುಹಾಜರಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತು ಪತ್ತೆಗೆ ತಕರಾರು ಇಲ್ಲವೆಂದು ನುಡಿದಿದ್ದು, ಆದುದರಿಂದ ಸಾಕ್ಷ್ಯ ವಿಚಾರಣೆಗೆ ಅನುಮತಿ ನೀಡಲಾಯಿತು.)**

<u>**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದಃ**</u>

ಈ ಹಂತದಲ್ಲಿ ಸಾಕ್ಷಿಗೆ ದಿಪಿ-9 ರಂತೆ ಪಂಚನಾಮೆ ಪ್ರತಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದರು. ಸದರಿ ಸಹಿಯನ್ನು ಚಿತ್ರಾವತಿ ನದಿ ಬಳಿ ಸುಮಾರು 14 ವರ್ಷಗಳ ಹಿಂದೆ ಅಪಘಾತ ಸಂಬಂಧ ಮಾಡಿರುವುದಾಗಿ ನುಡಿಯುತ್ತಾರೆ. ಸ್ಥಳದಲ್ಲಿ ದ್ವಿಚಕ್ರ ವಾಹನ ಇರುವುದಾಗಿ ನುಡಿಯುತ್ತಾರೆ. ನನ್ನ ಜೊತೆ ಚಾಸಾ-13 ರವರು ಸಹಿ ಮಾಡಿದರು. ಉಳಿದಂತೆ ನನಗೆ ಪ್ರಕರಣ ಬಗ್ಗೆ ಏನು ಗೊತ್ತಿಲ್ಲ ಎಂದು ನುಡಿಯುತ್ತಾರೆ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿಯನ್ನು ಕೋರಿದ್ದು ನೀಡಲಾಯಿತು).**

<u>**ಪಾಟೀ ಸವಾಲುಃ ಸ.ಸ.ಅ. ರವರಿಂದಃ**</u>

ದಿನಾಂಕ 25.11.2017 ರಂದು ಬೆಳಗ್ಗೆ 10.30 ರಿಂದ 12.30 ಸಮಯದಲ್ಲಿ ನಟರಾಜ್ ರವರಿಗೆ ಆಗಿರುವ ಅಪಘಾತ ಸಂಬಂಧ ಚಾಸಾ-4 ರವರ ವಾಸದ ಮನೆಯ ಬಳಿ, ಅವರು ತೋರಿಸಿದ

ಸ್ಥಳದಲ್ಲಿ ನಿಪಿ–9 ರಂತೆ ಪೊಲೀಸರು ಸ್ಥಳ ಪಂಚನಾಮೆ ನಡೆಸಿದರು. ಅಲ್ಲದೆ ನಟರಾಜ್ ರವರು ಸದರಿ ಸ್ಥಳದಲ್ಲಿ ಮೃತಪಟ್ಟ ಬಗ್ಗೆ ಪಂಚನಾಮೆ ಜರುಗಿಸಿದರು ಎಂದರೆ ಸರಿ. ನನ್ನ ಜೊತೆ ಚಾಸಾ–4 ಮತ್ತು 13 ರವರು ಸಹಿ ಮಾಡಿದರು ಎಂದರೆ ಸರಿ.

**ಪಾಟೀ ಸವಾಲು : ಶ್ರೀ ಕೆ.ಎಸ್. ಆರ್. ವಕೀಲರಿಂದ, ಆರೋಪಿ ಪರವಾಗಿಃ**

ನಿಪಿ–9 ಕ್ಕೆ ಚಿತ್ರಾವತಿ ನದಿ ಬಳಿ ಸಹಿ ಮಾಡಿದ್ದೇನೆ. ಸದರಿ ಪಂಚನಾಮೆ ಸ್ಥಳದ ಚೆಕ್ಕು ಬಂದಿ ಪೂರ್ವಕ್ಕೆ – ಕೆರೆ, ಪಶ್ಚಿಮ, ಉತ್ತರ ಮತ್ತು ದಕ್ಷಿಣಕ್ಕೆ –ದಾರಿ ಎಂದು ನುಡಿಯುತ್ತಾರೆ. ನಿಪಿ–9 ರಲ್ಲಿರುವ ವಿಚಾರವನ್ನು ನನಗೆ ಓದಿ ಹೇಳಲಿಲ್ಲ. ಸ್ಥಳದಲ್ಲಿ ಸುಮಾರು 10 ಜನರು ಸೇರಿದ್ದರು. ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.